
# A HAVEN FOR THE AILING IN THE HIMALAYAS



Advaita Ashrama, Mayavati, Uttarakhand, was started by Swami Vivekananda in 1899. It is a branch of Ramakrishna Math, Belur, West Bengal. This ashrama runs the *Mayavati Charitable Hospital* which was started in response to the pressing needs of the neighbouring villages, where live some of the poorest people of the country. Patients come here from distant places across hills and dales, sometimes trudging a distance of nearly 50 km. Their helplessness in sickness would touch any heart if only it were known. We run this 25 bed indoor hospital with its outdoor patients department in this out-of-the-way place since 1903. All treatment is done free of charges. In addition, qualified doctors from different cities conduct special medical camps for different ailments like Surgical, Dental, Urological, Eye throughout the year to provide special care to the poor villagers of the Kumaon region.

To accommodate these doctors we need to build a doctors' quarters cum guest house. On the ground floor will be the dining hall, pantry, reception, and the caretaker's room. On the first floor will be 8 rooms for the doctors. The second floor will have 6 rooms for guests and a meditation hall. The total cost of the building will come to around ₹ 60 lakhs. Please contribute liberally. Donations may be sent by Demand Draft or cheque in favour of '*Advaita Ashrama*' to the address given below. All donations are exempt from income tax under section 80 G of the Income tax Act, 1961.



ಸಂಪಾದಕೀಯ

# ಶ್ರೀರಾಮಕೃಷ್ಣ ಕಥಾಪ್ರಪಂಚ

(೨೦೧೧-೨೦೧೨ ರ ವರ್ಷ ಶ್ರೀರಾಮಕೃಷ್ಣರ ಭಕ್ತರಿಗೆ ಬಹು ಸಂತಸದ ವರ್ಷ; ಪೂಜ್ಯ ಗುರುದೇವರ ೧೭೫ ನೆಯ ಜಯಂತಿ ಮಹೋತ್ಸವದ ವರ್ಷ. ಈ ಪುಣ್ಯಸಂದರ್ಭದಲ್ಲಿ ಶ್ರೀರಾಮಕೃಷ್ಣರ ಕಥೆಗಳನ್ನು ಆಧರಿಸಿದ ಸಂಪಾದಕೀಯಗಳ ಸರಣಿಯೊಂದನ್ನು ಆರಂಭಿಸುತ್ತಿದ್ದೇವೆ. ಶ್ರೀರಾಮಕೃಷ್ಣರ ಕೃಪೆ ಇದರ ಮೇಲೆ ಇರಲಿ ಎಂದು ಅವರನ್ನು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇವೆ – ಸಂ.)

## ಸಂಸಾರದ ಬೇಗುದಿ

### ಅನಂತ ಆಧ್ಯಾತ್ಮಿಕ ಹರವು

ಶ್ರೀರಾಮಕೃಷ್ಣರ ಕಥೆಗಳದೇ ಒಂದು ವಿಭಿನ್ನ ಪ್ರಪಂಚ. ಅಲ್ಲಿನ ಪಾತ್ರಗಳು ಮತ್ತು ಸನ್ನಿವೇಶಗಳು ಅವರ ಅನುಭವ, ಅರಿವಿನ ಮೂಸೆಯಲ್ಲಿ ಸಂಸ್ಕಾರಗೊಂಡು ಬಂದಿರುವಂಥವು. ಹಾಗೆಂದೇ ಅವು ನಮ್ಮ ಮನಸ್ಸನ್ನು ಒಡನೆಯೇ ಸೆಳೆಯುತ್ತವೆ. ಅವುಗಳ ಹಿಂದಿನ ಭಾವ ಹೃದ್ಗತವಾಗುತ್ತದೆ. ಅತ್ಯಂತ ಕಠಿಣ ತಾತ್ತ್ವಿಕ ವಿಚಾರಗಳೂ ಸುಲಭವಾಗಿ ಅರ್ಥವಾಗಿಬಿಡುತ್ತವೆ. ಏಕೆಂದರೆ ಶ್ರೀರಾಮಕೃಷ್ಣರು ಕೇವಲ ತಾತ್ತ್ವಿಕರಲ್ಲ, ದಾರ್ಶನಿಕರು. ಅವರು ಸತ್ಯವನ್ನು ವಿವಿಧ ಆಯಾಮಗಳಲ್ಲಿ ಕಂಡಿದ್ದಾರೆ. ಇಡೀ ವಿಶ್ವವೇ ಭಗವಂತನ ಲೀಲೆ ಎಂಬುದನ್ನು ಪ್ರತ್ಯಕ್ಷವಾಗಿ ನೋಡಿದ್ದಾರೆ. ಪ್ರತಿಯೊಬ್ಬ ಮನುಷ್ಯನೂ ದೇವರ ಭವ್ಯರೂಪ ಎಂಬುದನ್ನು ಅರಿತಿದ್ದಾರೆ. ಇದಕ್ಕೂ ಹೆಚ್ಚಾಗಿ, ಶ್ರೀರಾಮಕೃಷ್ಣರು ಇಡೀ ಬ್ರಹ್ಮಾಂಡವೇ ಭಗವಂತನ ರೂಪ ಎಂಬ ಅನುಭವವನ್ನೂ ಪಡೆದಿದ್ದಾರೆ. ಈ ಕಾಣ್ಕೆಯಾಗಲಿ, ಅರಿವಾಗಲಿ, ಅನುಭವವಾಗಲಿ ಅವರಲ್ಲಿದ್ದ ಅಪಾರ ಆಧ್ಯಾತ್ಮಿಕ ಶಕ್ತಿಯಿಂದ ಗಳಿಸಿಕೊಂಡದ್ದು, ಮಾನವಕಲ್ಯಾಣಕ್ಕಾಗಿ ಈ ಭುವಿಯಲ್ಲಿ ತೋರಿಬಂದದ್ದು.

ಈ ಬಗೆಯ ಅತೀಂದ್ರಿಯ ಆಯಾಮದ ಜೊತೆಗೆ, ಅಷ್ಟೇ ಮುಖ್ಯವಾದ ಇನ್ನೊಂದು ಆಯಾಮವನ್ನೂ ಶ್ರೀರಾಮಕೃಷ್ಣರ ವ್ಯಕ್ತಿತ್ವದಲ್ಲಿ ಕಾಣುತ್ತೇವೆ. ಅದೇ ಮಾನವೀಯತೆ. ಇದು ಸಾಮಾನ್ಯ ಮಾನವೀಯ ಕಳಕಳಿಯಾಗಿ ನಿಂತುಬಿಡುವುದಿಲ್ಲ. ಈ ಜಗತ್ತೆಲ್ಲ ಭಗವನ್ಮಯವಾದುದು; ಅದರಲ್ಲೂ ಮಾನವನು ಭಗವಂತನ ಅತ್ಯಂತ ಶ್ರೇಷ್ಠ ಅಭಿವ್ಯಕ್ತಿಯಾಗಿದ್ದಾನೆ ಎಂಬ ಪರಿಪೂರ್ಣ ದರ್ಶನವೇ ಶ್ರೀರಾಮಕೃಷ್ಣರ ಮಾನವೀಯತೆಯ ಬೆನ್ನೆಲುಬು. ಇದಲ್ಲದೆ, ಶ್ರೀರಾಮಕೃಷ್ಣರು ಭಗವದವತಾರವೆಂದೇ ಪರಿಗಣಿಸಲ್ಪಟ್ಟಿದ್ದಾರೆ. ಹೀಗಾಗಿ ಮಾನವಜನಾಂಗದ ಮೇಲಿನ ಭಗವಂತನ ಕರುಣೆಯೇ ಅವರಲ್ಲಿ ಮಡುಗಟ್ಟಿದೆ. ಇದಕ್ಕಿಂತ ಉತ್ತಮ ರೀತಿಯ ಮಾನವೀಯತೆಯ ಭಾವ ಬೇರೆಲ್ಲಿ ಸಿಗಲು ಸಾಧ್ಯ?

**ಆಧ್ಯಾತ್ಮಿಕ ಅನುಭೂತಿ** ಮತ್ತು **ಮಾನವೀಯ ಅನುಕಂಪ**ಗಳ ಜೊತೆಜೊತೆಗೇ ಶ್ರೀರಾಮಕೃಷ್ಣರಿಗೆ ಮಾನವ ಸ್ವಭಾವದ ಬಗ್ಗೆ ಇದ್ದ ಸೂಕ್ಷ್ಮದೃಷ್ಟಿಯನ್ನೂ ನಾವಿಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕು. ಇದಕ್ಕೆಲ್ಲಾ ತಿಲಕವಿಟ್ಟಂತೆ ಅತ್ಯಂತ ಪರಿಶುದ್ಧ ಮತ್ತು ಉನ್ನತ ಮಟ್ಟದ ಹಾಸ್ಯಪ್ರಜ್ಞೆ ಕೂಡ ಅವರಲ್ಲಿದ್ದ ಒಂದು ಅಮೂಲ್ಯವಾದ ಸಂಪತ್ತು. ಇವೆಲ್ಲವನ್ನೂ ಸೇರಿಸಿ, ಒಂದು ರಸಕವಳದ ರೀತಿಯಲ್ಲಿ, ಕಥೆಗಳು ಮತ್ತು ದೃಷ್ಟಾಂತಗಳು ಅವರಿಂದ ಮೂಡಿಬಂದಿವೆ. ಹಾಗೆಂದೇ ಅವು ಮನೋರಂಜನೆಯ ಅಥವಾ ಬೋಧನೆಯ ದೃಷ್ಟಿಯಿಂದ ಮಾತ್ರವೇ ತಮ್ಮ ಮಹತ್ವವನ್ನು ಪಡೆದುಕೊಳ್ಳುವುದಿಲ್ಲ. ತಮ್ಮಲ್ಲಿ ತುಂಬಿಕೊಂಡಿರುವ ಅನಂತ ಆಧ್ಯಾತ್ಮಿಕ ಹರವಿನ ದೃಷ್ಟಿಯಿಂದ ಗಾಢ ಅಧ್ಯಯನ, ವಿಶ್ಲೇಷಣೆ ಮತ್ತು ಚಿಂತನೆಗಳಿಗೆ ಕೂಡ ಅವು ಸುಯೋಗ್ಯವಾಗಿವೆ. ಇದನ್ನೇ ಮುಂದಿನ ಕೆಲವು ಸಂಚಿಕೆಗಳಲ್ಲಿ, ಆದಷ್ಟು ಸರಳವಾಗಿ ವಿಚಾರಮಾಡಲು ಪ್ರಯತ್ನಿಸೋಣ.

### ದುಃಖದ ಕಾರಣ

ಎಲ್ಲ ಶಾಸ್ತ್ರಗಳೂ ಮಾನವನ ದುಃಖವನ್ನು ನಿವಾರಿಸುವ ಉದ್ದೇಶವನ್ನೇ ಹೊಂದಿವೆ. ಶ್ರೀರಾಮಕೃಷ್ಣರ ಬೋಧನೆಗಳೂ ಮಾನವೀಯತೆಯ ಮೇಲಿನ ಅಪಾರ ಅನುಕಂಪದಿಂದ ಹೊರಹೊಮ್ಮಿದಂಥವು, ಮಾನವಜೀವನದ ದುಃಖಕ್ಕೆ ಕಾರಣವನ್ನು ಕಂಡುಹಿಡಿಯುವುದಕ್ಕೆ ಮತ್ತು ಅದಕ್ಕೆ ಪರಿಹಾರವನ್ನು ಒದಗಿಸುವುದಕ್ಕೆ ತೊಡಗಿದಂಥವು.

ಶ್ರೀಶಂಕರಾಚಾರ್ಯರು "ಅವಿದ್ಯೆಯೇ ಸಂಸಾರದ ಮೂಲಕಾರಣ" ಎಂದು ಹೇಳುತ್ತಾರೆ. ಅವಿದ್ಯೆಯಿಂದ 'ಕಾಮ' ಉಂಟಾಗುತ್ತದೆ. ಕಾಮ ಅಥವಾ ಬಯಕೆಗಳನ್ನು ತೀರಿಸಿಕೊಳ್ಳಲು 'ಕರ್ಮ' ವನ್ನು ಮಾಡಬೇಕಾಗುತ್ತದೆ. ಆ ಕರ್ಮದ ಫಲಗಳನ್ನು ಅನುಭವಿಸಲು (ಪುಣ್ಯ ಅಥವಾ ಪಾಪ) ಮತ್ತೆ ಮತ್ತೆ 'ಜನ್ಮ' ವೆತ್ತಬೇಕಾಗುತ್ತದೆ. ಜನ್ಮವೆತ್ತಿದಾಗ, ಅವಿದ್ಯೆಯ

ದೆಸೆಯಿಂದ ಮತ್ತೆ ಕಾಮನೆ ಉಂಟಾಗುತ್ತದೆ. ಅದರಿಂದ ಮತ್ತೆ ಕರ್ಮ, ಆ ಮೂಲಕ ಮತ್ತೆ ಜನ್ಮ – ಹೀಗೆ ಸಂಸಾರದ ಚಕ್ರವು ಸುತ್ತುತ್ತಲೇ ಇರುತ್ತದೆ" ಎಂದು ಅವರು ಹೇಳುತ್ತಾರೆ. "ಕಾಮವೇ ಕ್ರೋಧವಾಗಿ ಪರಿಣಮಿಸುತ್ತದೆ. ಅದು ರಜೋಗುಣದಿಂದ ಉಂಟಾಗುವುದು. ಅದು ತುಂಬ ಹಾನಿಕಾರಿ. ಅದೇ ನಮ್ಮ ನಿಜವಾದ ವೈರಿ" ಎಂದು ಶ್ರೀಕೃಷ್ಣನೂ ಭಗವದ್ಗೀತೆಯಲ್ಲಿ ಎಚ್ಚರಿಕೆ ನೀಡುತ್ತಾನೆ. ಅದಲ್ಲದೆ "ಪ್ರತಿಯೊಬ್ಬ ಮನುಷ್ಯನಲ್ಲಿ ಇರುವ ಜ್ಞಾನವನ್ನು ಕಾಮವು ಮರೆಮಾಚಿ ಬಿಡುತ್ತದೆ" ಎಂದೂ ಅವನು ಹೇಳುತ್ತಾನೆ.

ಇದನ್ನೇ ಶ್ರೀರಾಮಕೃಷ್ಣರು ಸರಳವಾದ ಕಥೆಗಳ ಮೂಲಕ ನಮಗೆ ಉಪದೇಶಿಸುತ್ತಾರೆ. ನಮ್ಮೆಲ್ಲ ದುಃಖಗಳಿಗೆ ಕಾರಣವೇನು? ಇದನ್ನು ಈ ಕಥೆಯ ಮೂಲಕ ಅರ್ಥ ಮಾಡಿಕೊಳ್ಳಬಹುದು: ಒಂದು ಹದ್ದು ತನ್ನ ಪಾಡಿಗೆ ತಾನು ಹಾಯಾಗಿ ಹಾರಾಡಿಕೊಂಡಿತ್ತು. ಯಾವಾಗ ಒಂದು ಮೀನನ್ನು ಕಚ್ಚಿಕೊಂಡು ಮೇಲೆ ಹಾರಿತೋ, ಅದಕ್ಕೆ ಇಲ್ಲದ ಉಪಟಳ ಆರಂಭವಾಯಿತು. ನೂರಾರು ಕಾಗೆಗಳು ಅದನ್ನು ಹಿಂಬಾಲಿಸಿದವು. ಹದ್ದು ಎಲ್ಲಿಹೋದರೂ, ಅವು ಬಿಡಲೇ ಇಲ್ಲ. ಹೀಗೆ ಸುತ್ತಿ ಸುತ್ತಿ ಸಾಕಾದ ಹದ್ದಿಗೆ ಗಾಬರಿಯಾಯಿತು; ಅದರ ಕೊಕ್ಕಿನಲ್ಲಿ ಕಚ್ಚಿಕೊಂಡಿದ್ದ ಮೀನು ಕೆಳಕ್ಕೆ ಬಿತ್ತು. ಕಾಗೆಗಳೆಲ್ಲವೂ ಹದ್ದನ್ನು ಬಿಟ್ಟು, ಬಿದ್ದ ಮೀನಿನ ಕಡೆಗೆ ಹೋದವು. ಈ ಗೊಂದಲದಿಂದ ಪಾರಾದ ಹದ್ದು, ಒಂದು ಮರದ ಮೇಲೆ ನೆಮ್ಮದಿಯಿಂದ ಕುಳಿತುಕೊಂಡು ಹೀಗೆ ಯೋಚಿಸಿತಂತೆ: "ಅನಿಷ್ಟ ಮೀನೇ ಇದಕ್ಕೆಲ್ಲ ಕಾರಣ. ಅದನ್ನು ಎಸೆದ ಮೇಲೆಯೇ ನನಗೆ ಈಗ ಶಾಂತಿ ಸಿಕ್ಕಿತು."



ಶ್ರೀರಾಮಕೃಷ್ಣರು ಹೇಳುತ್ತಾರೆ, "ಎಲ್ಲಿಯವರೆಗೆ ಮೀನು ಇತ್ತೋ, ಅಂದರೆ ಪ್ರಾಪಂಚಿಕ ಆಸೆಗಳು ಇರುತ್ತವೆಯೋ, ಅಲ್ಲಿಯವರೆಗೆ ತೊಂದರೆ, ತಾಪತ್ರಯ ತಪ್ಪಿದ್ದಲ್ಲ" ಎಂದು. ಯಾವಾಗ ಒಬ್ಬ ವ್ಯಕ್ತಿಗೆ ಅದನ್ನು ಬಿಟ್ಟುಬಿಡಲು ಸಾಧ್ಯವಾಗುವುದೋ ಆಗ ಮಾತ್ರ ಅವನ ಗಲಿಬಿಲಿಯೆಲ್ಲ ಹೋಗಿ ಪ್ರಶಾಂತಿಯನ್ನು ಅನುಭವಿಸುವನು.

ಆಸೆಗಳನ್ನು ತೀರಿಸಿಕೊಂಡುಬಿಡುತ್ತೇವೆ ಎನ್ನುವ ಕಾಲ ಬರುವುದೇ ಇಲ್ಲ. ಶ್ರೀರಾಮಕೃಷ್ಣರು ಹೇಳುವಂತೆ ನಮ್ಮ ಆಸೆಯ ಕೊಪ್ಪರಿಗೆಯನ್ನು ಯಾರೂ ತೃಪ್ತಿಪಡಿಸಲಾರರು. ಅದನ್ನು ಸೂಚಿಸುವ ಈ ಕಥೆ ತುಂಬ ಸ್ವಾರಸ್ಯಕರವಾಗಿದೆ: ಒಬ್ಬ ಕ್ಷೌರಿಕನಿಗೆ ಕಾಡಿನಲ್ಲಿ ಒಂದು ಅಶರೀರವಾಣಿ ಕೇಳಿಸಿತು. ಅದರ ಪ್ರಕಾರ ಅವನಿಗೆ ಏಳು ಕೊಪ್ಪರಿಗೆ ಚಿನ್ನ ಸಿಕ್ಕಿತು. ಅವನು ಅದನ್ನು ಮನೆಗೆ ತಂದ. ಆರು ಕೊಪ್ಪರಿಗೆಗಳು ಚಿನ್ನದ ನಾಣ್ಯಗಳಿಂದ ತುಂಬಿದ್ದವು. ಏಳನೆಯ ಕೊಪ್ಪರಿಗೆ ತುಂಬಿರಲಿಲ್ಲ. ಅದನ್ನು ತುಂಬಿಸಬೇಕು ಎಂಬ ಆಸೆ ಅವನಿಗೆ. ಅದಕ್ಕಾಗಿ ಸರ್ವಪ್ರಯತ್ನವನ್ನೂ ಮಾಡಿದ. ಉಪವಾಸ ಮಾಡಿ ಹಣ ಉಳಿಸಿದ. ಹೆಂಡತಿಯ ಆಭರಣಗಳನ್ನು ಮಾರಿದ. ಆದರೂ ಏಳನೆಯ ಕೊಪ್ಪರಿಗೆ ತುಂಬಲೇ ಇಲ್ಲ. ಅವನು ರಾಜನಿಗೆ ಕ್ಷೌರ ಮಾಡುತ್ತಿದ್ದ. ರಾಜನಿಗೆ ಸಂಬಳ ಹೆಚ್ಚಿಸುವಂತೆ ಕೋರಿದ. ಅದನ್ನೂ ಚಿನ್ನವನ್ನಾಗಿ ಪರಿವರ್ತಿಸಿದರೂ, ಏಳನೆಯ ಕೊಪ್ಪರಿಗೆ ತುಂಬಲೇ ಇಲ್ಲ. ಹೊಟ್ಟೆಗೂ ಇಲ್ಲದೆ, ಮನಸ್ಸಿಗೆ ನೆಮ್ಮದಿಯೂ ಇಲ್ಲದೆ ಬಡಕಲಾಗಿದ್ದ. ಒಮ್ಮೆ ರಾಜ ಅವನನ್ನು ಕೇಳಿದ, "ಏಕೆ ಹೀಗಿದ್ದೀಯೆ? ನಿನಗೆ ಏಳು ಕೊಪ್ಪರಿಗೆ ಚಿನ್ನ ಸಿಕ್ಕಿದೆಯೇನು?" ಕ್ಷೌರಿಕನಿಗೆ ಅದನ್ನು ಕೇಳಿ ಬಹಳ ಆಶ್ಚರ್ಯವಾಯಿತು. ತನಗೂ ಇದೇ ಅನುಭವವಾಗಿತ್ತು, ಇದು ಒಬ್ಬ ಯಕ್ಷನ ಕಿತಾಪತಿ ಎಂದು ರಾಜ ಹೇಳಿದ. ರಾಜನ ಮಾತಿನಂತೆ, ಕ್ಷೌರಿಕ ಕಾಡಿಗೆ ಹೋಗಿ, "ನಿನ್ನ ಕೊಪ್ಪರಿಗೆಗಳನ್ನು ನೀನೇ ತೆಗೆದುಕೋ" ಎಂದು ಯಕ್ಷನಿಗೆ ಹೇಳಿದ. ಮನೆಗೆ ಬಂದು ನೋಡುತ್ತಾನೆ, ಏಳು ಕೊಪ್ಪರಿಗೆಗಳೂ ಕಣ್ಮರೆಯಾಗಿದ್ದವು. ಅಂದಿನಿಂದ ಅವನು ನೆಮ್ಮದಿಯಿಂದ ಜೀವಿಸಲು ಆರಂಭಿಸಿದ.

### ಮಾಯೆಯ ಹಂದರ

ಆದರೆ ಆಸೆಯು ಅಷ್ಟು ಸುಲಭವಾಗಿ ಬಿಟ್ಟುಹೋಗುವುದಿಲ್ಲ. "ಆಸೆ ಉಂಟಾಗುವುದು ಮಾಯೆ ಅಥವಾ ಅವಿದ್ಯೆಯಿಂದ" ಎಂಬ ಶ್ರೀಶಂಕರಾಚಾರ್ಯರ ಮಾತನ್ನು ನೆನಪಿನಲ್ಲಿ ಇಡಬೇಕು. ಶ್ರೀರಾಮಕೃಷ್ಣರು, "ಒಂದು ಸ್ವಲ್ಪ ಆಸಕ್ತಿಯೂ ದೊಡ್ಡ ಬಂಧನಕ್ಕೆ ನಮ್ಮನ್ನು ಸಿಲುಕಿಸುತ್ತದೆ" ಎಂದು ಹೇಳುತ್ತಾರೆ. ಅವರು ಹೇಳುತ್ತಿದ್ದ, 'ಸಾಧುವಿನ ಕೌಪೀನದ ಕಥೆ' ಇಲ್ಲಿ ಪ್ರಸ್ತುತವಾಗುತ್ತದೆ. ಸಾಧುವೊಬ್ಬ ನಿರ್ಜನ ಪ್ರದೇಶದಲ್ಲಿ ಧ್ಯಾನ ಮಾಡುತ್ತಿದ್ದ. ಬೆಳಗ್ಗೆ ಸ್ನಾನವಾದ ಮೇಲೆ ತನ್ನ ಬಟ್ಟೆ ಮತ್ತು ಕೌಪೀನವನ್ನು, ಒಣಗಲು ಒಂದು ಮರಕ್ಕೆ ನೇತುಹಾಕುತ್ತಿದ್ದ. ಒಂದು ದಿನ ಹಳ್ಳಿಯಲ್ಲಿ ಭಿಕ್ಷೆ ಬೇಡಿಕೊಂಡು ಬಂದಾಗ, ಇಲಿಗಳು ಕೌಪೀನವನ್ನು ಹರಿದುಬಿಟ್ಟಿದ್ದವು. ಹೀಗೆ ಕೆಲವು ದಿನಗಳು ನಡೆದವು. ಇಲಿಗಳ ಉಪಟಳವನ್ನು ತಾಳಲಾರದೆ, ಅವುಗಳಿಂದ ರಕ್ಷಿಸಿಕೊಳ್ಳಲು ಒಂದು ಬೆಕ್ಕನ್ನು ಸಾಕಿದ. ಬೆಕ್ಕಿಗೆ ಹಾಲು ಬೇಕಲ್ಲವೇ? ಪ್ರತಿನಿತ್ಯ ಹಳ್ಳಿಯವರ ಹತ್ತಿರ ಹಾಲು ಬೇಡುತ್ತಿದ್ದ. ಹಳ್ಳಿಯವರು, ಹಾಲಿಗಾಗಿ ಒಂದು ಹಸುವನ್ನೇ ದಾನವಾಗಿ ಇವನಿಗೆ ಕೊಟ್ಟುಬಿಟ್ಟರು. ಆದರೆ ಹಸುವಿಗೆ ಮೇವು ಬೇಕಲ್ಲವೇ? ಅದನ್ನು ಬೇಡಲು ಹೊರಟಾಗ ಹಳ್ಳಿಯವರು, "ನಿಮ್ಮ ಆಶ್ರಮದ ಬಳಿ ಇರುವ ಖಾಲಿ ಜಮೀನಿನಲ್ಲಿ ಸಾಗುವಳಿ ಮಾಡಿಕೊಳ್ಳಿ" ಎಂದರು. ಹಾಗೆಯೇ ವ್ಯವಸಾಯ ಆರಂಭ ಮಾಡಿದ. ಹೀಗೇ ಮುಂದುವರಿದು, ಜಮೀನನ್ನು ನೋಡಿಕೊಳ್ಳುವುದಕ್ಕೆ ಆಳುಕಾಳುಗಳನ್ನು ಗೊತ್ತುಮಾಡಿಕೊಂಡ. ಕಾಲಕ್ರಮೇಣ ಒಬ್ಬ ಜಮೀನುದಾರನೇ ಆಗಿಬಿಟ್ಟ. ಮುಂದೆ ಮನೆವಾರ್ತೆ ನೋಡಿಕೊಳ್ಳುವುದಕ್ಕೆ ಬೇಕೆಂದು ಮದುವೆ ಕೂಡ ಆಗಿಬಿಟ್ಟ. ಕೆಲ ವರ್ಷಗಳ ನಂತರ ಅವನ ಗುರುಗಳು ಬಂದು ನೋಡುತ್ತಾರೆ, ಧ್ಯಾನ ಮಾಡುತ್ತಿದ್ದ ತಮ್ಮ ಶಿಷ್ಯ ಈಗ ಗೃಹಸ್ಥನಾಗಿಬಿಟ್ಟಿದ್ದಾನೆ! ಏಕೆಂದು ಕೇಳಿದರೆ, ಅಡ್ಡಬಿದ್ದು ಅವನು ಹೇಳುತ್ತಾನೆ, "ಗುರುಗಳೇ, ಇದೆಲ್ಲ ಒಂದು ಕೌಪೀನಕ್ಕಾಗಿ" ಎಂದು.

ಅದಕ್ಕೇ ಶ್ರೀರಾಮಕೃಷ್ಣರು ಹೇಳುವುದು, "ನೀರಿನ ಗಡಿಗೆಯ ತಳದಲ್ಲಿ ಒಂದು ಸಣ್ಣ ತೂತು ಇದ್ದರೂ, ನೀರೆಲ್ಲ ಸೋರಿಹೋಗುತ್ತದೆ. ಹಾಗೆಯೇ ಸಾಧಕರಲ್ಲಿ ಅತ್ಯಲ್ಪ ಪ್ರಾಪಂಚಿಕತೆ ಇದ್ದರೂ ಅವರ ಸಾಧನೆಯೆಲ್ಲ ನಿಷ್ಫಲವಾಗುತ್ತದೆ" ಎಂದು. ಮಾಯೆಗೆ ಶ್ರೀರಾಮಕೃಷ್ಣರು ಕೊಡುವ ವಿವರಣೆ ಹೀಗಿದೆ: "ಆಧ್ಯಾತ್ಮಿಕ ವಿಕಾಸವನ್ನು ತಡೆಯುವ ಪ್ರಾಪಂಚಿಕ ಆಸಕ್ತಿಯೇ ಮಾಯೆ", "ಮಾಯೆ ಅಥವಾ ಪ್ರಾಪಂಚಿಕ ಆಸಕ್ತಿಯೇ ಪ್ರಪಂಚವನ್ನೆಲ್ಲಾ ಆವರಿಸಿಕೊಂಡಿದೆ." ಇಂಥ ಆಸಕ್ತಿಯನ್ನು ಗೆಲ್ಲುವುದು ಹೇಗೆ? ಶ್ರೀರಾಮಕೃಷ್ಣರು ಹೀಗೆ ಹೇಳಿಕೊಡುತ್ತಾರೆ: "ವಿಷಸರ್ಪಗಳಿಂದ ಕೂಡಿದ ಮನೆಯಲ್ಲಿರುವವರು ಯಾವಾಗಲೂ ಎಚ್ಚರಿಕೆಯಿಂದ ಇರುವಂತೆ, ಕಾಮಕಾಂಚನಗಳ ಪ್ರಲೋಭನೆಗೆ ಸಿಕ್ಕದಂತೆ ನಾವು ಯಾವಾಗಲೂ ಜಾಗರೂಕರಾಗಿರಬೇಕು." ಆಸಕ್ತಿಯನ್ನು ಗೆಲ್ಲುವುದಕ್ಕೆ ಶ್ರೀರಾಮಕೃಷ್ಣರು ಹೇಳುವ ಸರಳ ಸೂತ್ರವೆಂದರೆ: **ವಿಷಯೇ ವಿರಾಗ್, ಈಶ್ವರೇ ಅನುರಾಗ್** – ಪ್ರಾಪಂಚಿಕ ವಿಷಯಗಳಲ್ಲಿ ವೈರಾಗ್ಯ ಮತ್ತು ಭಗವಂತನಲ್ಲಿ ಅನುರಾಗ. ಎರಡು ಅಯಸ್ಕಾಂತಗಳಿವೆ. ಒಂದು ದೊಡ್ಡದು, ಇನ್ನೊಂದು ಚಿಕ್ಕದು. ಎರಡೂ ಸಮದೂರದಲ್ಲಿರುವ ಒಂದು ಕಬ್ಬಿಣದ ತುಂಡನ್ನು ಆಕರ್ಷಿಸುತ್ತವೆ ಎಂದಿಟ್ಟುಕೊಳ್ಳಿ. ಅವುಗಳಲ್ಲಿ ಯಾವುದಕ್ಕೆ ಕಬ್ಬಿಣದ ತುಂಡು ಆಕರ್ಷಿತವಾಗುತ್ತದೆ? ದೊಡ್ಡ ಅಯಸ್ಕಾಂತಕ್ಕೆ ತಾನೇ. ಹಾಗೆಯೇ ಭಗವಂತನಲ್ಲಿ ಪ್ರೀತಿ ಅಥವಾ ಅನುರಾಗಗಳು ಬೆಳೆದಾಗ, ಅದಕ್ಕಿಂತ ಎಷ್ಟೋ ಪಟ್ಟು ಕ್ಷುಲ್ಲಕವಾದ ಪ್ರಾಪಂಚಿಕ ವಿಷಯವಸ್ತುಗಳ ಮೇಲಿನ ಆಸಕ್ತಿ ನಿಲ್ಲಲಾರದು. ಇದು ಶ್ರೀರಾಮಕೃಷ್ಣರು ನಮಗೆ ಹೇಳಿಕೊಡುವ ಸಾಧನಾವಿಧಾನ.

### ಮಾಯೆಯ ಬಲ

ಆದರೆ ಹೀಗೆ ಭಗವಂತನನ್ನು ಪ್ರೀತಿಸುವುದಕ್ಕೆ ಸಾಧಾರಣ ಮನುಷ್ಯರಾದ ನಮಗೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ತುಂಬ ಪ್ರಯತ್ನ ಮಾಡಬೇಕಾಗುತ್ತದೆ. ಸಾಧಾರಣ ಜನರ ಇಂಥ ಸ್ವಭಾವವನ್ನು ಕಲ್ಪವೃಕ್ಷದ ಕಥೆಯ ಮೂಲಕ ಶ್ರೀರಾಮಕೃಷ್ಣರು ಸ್ವಾರಸ್ಯಕರವಾಗಿ ಹೀಗೆ ಚಿತ್ರಿಸುತ್ತಾರೆ: ನಡೆದು ನಡೆದು ಬಳಲಿ ಬೆಂಡಾಗಿದ್ದ ಯಾತ್ರಿಕನೊಬ್ಬ ಒಂದು ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ. ಆಗ, 'ಹಾಸಿಗೆ ಇದ್ದರೆ ಎಷ್ಟು ಚೆನ್ನಾಗಿತ್ತು' ಎಂದು ಅವನಿಗೆ ಅನ್ನಿಸಿತು. ಆಗ ಒಡನೆಯೇ ಹಾಸಿಗೆ ಕಾಣಿಸಿಕೊಂಡಿತು. ಆಗ ಅವನಿಗೆ ಗೊತ್ತಾಯಿತು, ಏನು ಕೇಳಿದರೂ ಕೊಡುವ ಕಲ್ಪವೃಕ್ಷದ ಕೆಳಗೆ ತಾನು ಮಲಗಿದ್ದೇನೆ ಎಂದು. ಹೀಗೆ ಅವನು ಆಸೆಪಟ್ಟಂತೆ, ಒಬ್ಬಳು ಯುವತಿ ಅವನ ಕಾಲನ್ನು ಒತ್ತತೊಡಗಿದಳು, ರುಚಿರುಚಿಯಾದ ತಿಂಡಿತೀರ್ಥಗಳು ಬಂದವು. ಅವನ್ನೆಲ್ಲ ತೃಪ್ತಿಯಾಗುವಂತೆ ತಿಂದು, ಹಾಯಾಗಿ ಮಲಗಿಕೊಂಡವನಿಗೆ, "ಒಂದು ಹುಲಿ ಬಂದು ನನ್ನನ್ನು ತಿಂದುಬಿಟ್ಟರೆ..?" ಎಂಬ ಯೋಚನೆ ಬರಬೇಕೇ?! ಒಡನೆಯೇ ಒಂದು ದೊಡ್ಡ ಹುಲಿ ಬಂದು ಅವನನ್ನು ಸಾಯಿಸಿಯೇಬಿಟ್ಟಿತು.